ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಹೌದು, ಪ್ರಸ್ತುತ ಹಣಕಾಸಿನ ಮಂಗ್ಗಟ್ಟಿನಿಂದಾಗಿ ಸಮಿತಿಗಳ ಶಿಫಾರಸ್ಸುಗಳನ್ನು ಜಾರಿಗೆ ತರುವುದನ್ನು ಸದ್ಯಕ್ಕೆ ಮುಂದೂಡಲು ತೀರ್ಮಾನಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ಒಕ್ಕಲುತನ ಹುಟ್ಟುವಳಿ ಮಾರಾಟ ಕೇಂದ್ರವನ್ನು ಪ್ರತ್ಯೇಕಿಸುವುದು.

೪೪೫. **ಶ್ರೀ ಪಿ. ಸಿ. ಸಿದ್ದನಗೌಡ್ರ** (ಕಲಘಟಗಿ).— ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿ ಬೇರ್ಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆ ?

ಆ) ಹಾಗಿದ್ದಲ್ಲಿ ಬೇರ್ಪಡಿಸುವ ವಿಚಾರ ಈಗ ಯಾವ ಹಂತದಲ್ಲಿದೆ ?

ಇ) ಕಲಘಟಗಿ ತಾಲ್ಲೂಕಿಗೆ ಒಂದು ಪ್ರತ್ಯೇಕ ಒಕ್ಕಲುತನ ಹುಟ್ಟುವಳಿ ಮಾರುಕಟ್ಟೆ ಸಮಿತಿ, ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆ ?

ಈ) ಹಾಗಿದ್ದಲ್ಲಿ, ಅದು ಯಾವ ಹಂತದಲ್ಲಿದೆ ?

ಶ್ರೀ ಹೆಚ್. ಆರ್. ರಾಜು (ಸಹಕಾರ ರಾಜ್ಯ ಸಚಿವರು).—

ಅ) ಹೌದು.

ಆ)
ಇ)
ಈ) } ವಿಷಯವು ಪರಿಶೀಲನೆಯಲ್ಲಿದೆ.

ಅಮರಗೋಳ ಮಾರ್ಕೆಟ್ ಯಾರ್ಡ್ ಹುಬ್ಬಳ್ಳಿಯಲ್ಲಿ ಪ್ರಾರಂಭಿಸುವ ಕುರಿತು

೪೪೬. **ಶ್ರೀ ಪಿ. ಸಿ. ಸಿದ್ದನಗೌಡ** (ಕಲಘಟಗಿ).— ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಹುಬ್ಬಳ್ಳಿ ತಾಲ್ಲೂಕಿನ ಅಮರಗೋಳದ ಮಾರ್ಕೆಟ್‌ಯಾರ್ಡ್ ಕಟ್ಟಡದ ಕೆಲಸ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

೨) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

೩) ಮಾರುಕಟ್ಟೆ ಯಾರ್ಡಿನ ಕೆಲಸ ಪೂರ್ಣಗೊಂಡು ಪ್ರಾರಂಭವಾಗುವುದು ಯಾವಾಗ?

ಶ್ರೀ ಹೆಚ್. ಆರ್. ರಾಜು (ಸಹಕಾರ ಸಚಿವರು).—

೧) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

೨) ಇದಕ್ಕೆ ಮುಖ್ಯವಾಗಿ ಹಣಕಾಸಿನ ಕೊರತೆಯೇ ಕಾರಣ.

೩) ಮೊದಲನೆಯ ಹಂತದ ಕಾಮಗಾರಿಗಳು ಮುಗಿಯಲು ಇನ್ನೂ ಸುಮಾರು ೨.೦೦ ಕೋಟಿ ರೂಪಾಯಿಗಳು ಬೇಕಾಗಿದ್ದು, ಈ ಬಗ್ಗೆ ೧೮೦.೧೦ ಲಕ್ಷ ರೂಗಳನ್ನು ಸಬಾರ್ಡ್ ಸಂಸ್ಥೆಯವರು ಸಾಲ ರೂಪವಾಗಿ ಕೊಡಲು ಒಪ್ಪಿದ್ದು ಈ ಯೋಜನೆಯಡಿಯಲ್ಲಿ ಗುರ್ತಿಸಲಾದ ಕಾಮಗಾರಿಗಳು ಪೂರ್ಣಗೊಂಡಾಗ ಮಾರುಕಟ್ಟೆಯನ್ನು ಹಳೆಯ ಯಾರ್ಡಿನಿಂದ ಹೊಸ ಯಾರ್ಡಿಗೆ ಸ್ಥಳಾಂತರಿಸಲು ಸಾಧ್ಯ.

ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸುವ ಬಗ್ಗೆ

೪೪೭. **ಶ್ರೀ ಶಿವಾನಂದ ಹೆಚ್. ಕೌಜಲಗಿ** (ಬೈಲಹೊಂಗಲ).— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಯೋಜನೆ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?